

-ಆರನೇ ಪುಟದಿಂದ

ಮುಳ್ಳಿನ ಸಸ್ಯಗಳ ಕಿರೀಟವೆಂದೇ ಗುರುತಿಸಬಹುದು. ದಕ್ಷಿಣ ಆಫ್ರಿಕಾ ಮತ್ತು ಮಡಗಾಸ್ಕರ್‌ನ ಮರುಭೂಮಿಯಲ್ಲಿ ಕಂಡು ಬರುವ ಯುಫೋರ್ಬಿಯಾಗಳು ಉತ್ತರ ಮತ್ತು ದಕ್ಷಿಣ ಅಮೆರಿಕದ 'ಕ್ಯಾಕ್ಟೈ'ಯ ಭೌತಿಕ ಲಕ್ಷಣಗಳಲ್ಲಿ ಸಾಮ್ಯತೆ ಕಂಡುಬರುತ್ತದೆ.

ಎಲೆಯೋಫೋರ್ಬಿಯೋ, ಎಂಡಾಡೆನಿಯುಮ್, ಮೋನಾಡೆನಿಯುಮ್, ಸೈನಾಡೆನಿಯುಮ್ ಪೆಡಿಲ್ಯಾಂಥಸ್ ಇದಕ್ಕಿರುವ ಇತರ ಹೆಸರುಗಳು. ಈ ಸಸ್ಯಗಳು ಹಾಲಿನಂತಹ ನೊರೆಯುಕ್ಕಿಸುವ ವಿಷಕಾರಿ ಲ್ಯಾಟೆಕ್ಸ್‌ನಂತಹ ದ್ರವವನ್ನು ಕಾಂಡದಿಂದ ಒಸರುತ್ತವೆ. ಹೂವಿನ ಭಿನ್ನರಚನೆಯಿಂದಾಗಿ ವಿಶೇಷವೆನಿಸುವ ಯುಫೋರ್ಬಿಯಾ ಏಕಲಿಂಗಿ ಹೂ ಬಿಡುವ ಸಸ್ಯಗಳ ಸಾಲಿಗೆ ಸೇರುತ್ತದೆ.

ಮೂರು ಬಗೆಯ ದ್ಯುತಿಸಂಶ್ಲೇಕ್ಷಣಾ ಕ್ರಿಯೆಗಳಾದ ಸಿಎಎಂ, ಸಿ3, ಸಿ4 ಗಳನ್ನು ಕೈಗೊಳ್ಳುವ ಏಕೈಕ ಸಸ್ಯಸಂಕುಲಕ್ಕೆ ಸೇರಿದ ಕೀರ್ತಿ ಯುಫೋರ್ಬಿಯಾಕ್ಕೆ ಸಂದಿದೆ. ವರ್ಷಪೂರ್ತಿ ಬೆಳೆಯುವ ಪುಟ್ಟ ಸಸ್ಯಗಳು ಹಾಗೂ ದೊಡ್ಡದಾದ ಬಹುವಾರ್ಷಿಕವಾಗಿ ಜೀವಿಸಬಲ್ಲ ಯುಫೋರ್ಬಿಯಾ ಸಂಕುಲದಲ್ಲಿ 2000ಕ್ಕೂ ಅಧಿಕ ಸಸ್ಯಗಳಿವೆ. ಹೂ ಬಿಡುವ ಸಸ್ಯಗಳಲ್ಲಿಯೇ ಉನ್ನತ ಸ್ಥಾನ ಗಳಿಸಿದ ಹೆಗ್ಗಳಿಕೆ ಹಾಗೂ ಅತಿ ಹೆಚ್ಚಾದ ಕ್ರೋಮೋಸೋಮುಗಳನ್ನೊಳಗೊಂಡ ವರ್ಗಕ್ಕೆ ಸೇರುತ್ತವೆ ಯುಫೋರ್ಬಿಯಾಗಳು.